ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ, ದಿನಾಂಕ ೨೫ನೇ ಜೂನ್ ೧೯೯೦, ಆಷಾಢ ೪, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶಿವಮೊಗ್ಗದಲ್ಲಿ ಕೃಷಿ ಮಹಾವಿದ್ಯಾಲಯ ಆರಂಭಿಸುವ ಬಗ್ಗೆ

೯೨೭. ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗದಲ್ಲಿ ಈ ವರ್ಷವೇ ಕೃಷಿ ಕಾಲೇಜ್ ಅನ್ನು ಆರಂಭಿಸಲಾಗಿದೆ.

ಆ) ಹಾಗಿದ್ದಲ್ಲಿ, ಇದುವರೆಗೆ ಏನೇನು ಕೆಲಸವಾಗಿದೆ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ಶಿವಮೊಗ್ಗದಲ್ಲಿ ಕೃಷಿ ಕಾಲೇಜನ್ನು ಪ್ರಾರಂಭಿಸುವ ವಿಷಯ ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರು ಈ ಒಂದು ಖಾತೆಯ ಜವಾಬ್ದಾರಿಯನ್ನು ತೆಗೆದುಕೊಂಡ ನಂತರ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಪ್ರವಾಸಕ್ಕೆ ಬಂದಿದ್ದಾಗ ಎರಡು ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಭಾಗವಹಿಸುತ್ತಾ ಕೃಷಿ ಕಾಲೇಜುಗಳನ್ನು ತೆಗೆಯುತ್ತೇವೆಂದು ವಾಗ್ದಾನ ಮಾಡಿ ಬಂದಿದ್ದಾರೆ. ಅದಕ್ಕಾಗಿ ಎಲ್ಲ ಪಕ್ಷಗಳ ಪ್ರಮುಖರು ಅವರಿಗೆ ಅಭಿನಂದನೆಗಳ ಸುರಿಮಳೆಯನ್ನೇ ಸುರಿಸಿದ್ದಾರೆ ಆದರೆ ಇಲ್ಲಿ ಉತ್ತರವನ್ನು ನೋಡಿದರೆ ಮಾಮೂಲಿಯ ಧಾಟಿಯಲ್ಲಿ ಪರಿಶೀಲಿಸಲಾಗುತ್ತಿದೆ ಅಂತಲೇ ಹೇಳುತ್ತಿದ್ದಾರೆ. ಇದರಿಂದ ನಿಜಕ್ಕೂ ಹಿಂದಿನ ಅನೇಕ ವರ್ಷಗಳಿಂದಲೂ ಆಗುತ್ತಿರುವ ತೊಂದರೆಯನ್ನು ಮುಂದುವರಿಸುತ್ತಾರೇನೋ ಎಂಬ ಭಯ ನನಗೆ ಆಗುತ್ತಿದೆ. ಆದ್ದರಿಂದ ದಯವಿಟ್ಟು ಮಾನ್ಯ ಕೃಷಿ ಸಚಿವರು ಈ ದಿಕ್ಕಿನಲ್ಲಿ ಏನು ಪ್ರಯತ್ನ ನಡೆದಿದೆ? ಕೃಷಿ ಕಾಲೇಜುಗಳನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎನ್ನುವುದಕ್ಕೆ ಉತ್ತರ ಕೊಟ್ಟು, ಅವರು ಶಿವಮೊಗ್ಗ ಜಿಲ್ಲೆಯ ಜನತೆಯ ದೃಷ್ಟಿಯಲ್ಲಿ ವಿವಾದಾತ್ಮಕ ವ್ಯಕ್ತಿಯಾಗಿದ್ದರೂ ಕೂಡ ಕ್ರಾಂತಿಕಾರಕವಾದ ದಿಟ್ಟ ಹೆಜ್ಜೆಯನ್ನು ತೆಗೆದುಕೊಳ್ಳುತ್ತಾರೆಂಬ ನಂಬಿಕೆಯನ್ನು ಉಳಿಸಿಕೊಳ್ಳಬೇಕೆಂದು ನಾನು ತಮ್ಮ ಮುಂಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ವಿವಾದಾತ್ಮಕ ವ್ಯಕ್ತಿ ಎನ್ನುತಕ್ಕಂಥ ಹಣೆ ಪಟ್ಟಿಯನ್ನು ಹಚ್ಚಿದ್ದಕ್ಕಾಗಿ ಮುತ್ತೊಂದು ಸಾರಿ ಮಾನ್ಯ ಸದಸ್ಯ ಮಿತ್ರರಿಗೆ ಅಭಿನಂದಿಸುತ್ತೇನೆ.

ಅಧ್ಯಕ್ಷರು.—ವಿವಾದ ಹಾಗೂ ಕ್ರಾಂತಿ ಎರಡೂ ಜೊತೆಯಲ್ಲಿ ಹೋಗತಕ್ಕಂಥಾದ್ದು ತಾನೆ.

ಶ್ರೀ ಎಸ್. ಬಂಗಾರಪ್ಪ.—ನಾನಾಗೇ ಹೋಗಿ ಕಾಲೇಜನ್ನು ಮಾಡುತ್ತೇನೆ ಎನ್ನುವ ಮಾತನ್ನು ನಾನಂ ಎಂದು ಆಡಿಲ್ಲ. ಪ್ರಶ್ನೆಗಳನ್ನು ಕೇಳಿದಾಗ ಸಂಬಂಧಪಟ್ಟ ಸಚಿವನಾಗಿ ನಾನು ಉತ್ತರ ಕೊಡ ಬೇಕಾಗುತ್ತದೆ. ಈ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎನ್ನುತಕ್ಕ ಮಾತನ್ನು ನಾನು ಹೇಳಿದ್ದೇನೆ. ಮೊನ್ನೆ ಕೂಡ ವಿಧಾನ ಪರಿಷತ್ತಿನಲ್ಲಿ ನಾನು ಹೇಳಿದ್ದೇನೆ. ಇದು ಶಿವಮೊಗ್ಗ ಒಂದೆ ಅಲ್ಲ. ಬಿಜಾಪುರ, ಮಂಡ್ಯ ಇಲ್ಲಿ ಕೃಷಿ ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ಮೂಡಿಗೆರೆಯಲ್ಲಿ ತೋಟ ಗಾರಿಕೆಯ ಡಿಗ್ರಿ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ಇದೆ. ಈ ನಾಲ್ಕು ಕಾಲೇಜುಗಳ ಬಗ್ಗೆ ಇದೇ ಅಕಾಡೆಮಿಕ್ ವರ್ಷದಲ್ಲೇ ಪ್ರಾರಂಭ ಮಾಡುವುದಕ್ಕೋಸ್ಕರ ಈಗಾಗಲೇ ಸಿದ್ಧತೆಗಳನ್ನು ಮಾಡಿ ಕೊಂಡಿದ್ದೇವೆ. ಎರಡೂ ಕೃಷಿ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳು, ಕಾರ್ಯದರ್ಶಿಗಳೂ ಹಾಗೂ ನಾವು ಜೊತೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿ ತೀರ್ಮಾನ ಮಾಡಿ ಈಗಾಗಲೇ ಅದರ ಬಗ್ಗೆ ಸೂಚನೆಯನ್ನು ಕೊಟ್ಟಿದ್ದೇನೆ. ಆದರೆ ಇವನ್ನು ಪ್ರಾರಂಭ ಮಾಡಬೇಕೆಂದರೆ ತಮಗೆ ಹಣಕಾಸಿನ ವಿಚಾರ ಗೊತ್ತಿದೆ. ಯಾವುದೇ ಪಕ್ಷದ ಸರ್ಕಾರ ಇದ್ದರೂ ಕೂಡ ಇದನ್ನು ವಿಚಾರ ಮಾಡಿ, ಪ್ರಾರಂಭ ಮಾಡ ಬೇಕು. ಆ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಇದೇ ಅಕಾಡೆಮಿಕ್ ಇಯರ್‌ನಲ್ಲಿ ಪ್ರಾರಂಭ ಮಾಡುವ ಉದ್ದೇಶ ಇರುವಾಗ ಎಷ್ಟು ತೀವ್ರತೆ ಸರ್ಕಾರಕ್ಕೆ ಇದೆ ಎಂಬುದನ್ನು ಮಾನ್ಯ ಸದಸ್ಯರು ಗ್ರಹಿಸಿದ್ದೀರಿ ಎಂದು ನಾನು ಭಾವಿಸುತ್ತೇನೆ. ತಮಗೆ ಎಷ್ಟು ತೀವ್ರತೆ ಇದೆ ಅಷ್ಟೇ ತೀವ್ರತೆ ಇಟ್ಟುಕೊಂಡು ನಾವು ಕೆಲಸ ಮಾಡುತ್ತಿದ್ದೇವೆ. ಕೃಷಿ ಇಲಾಖೆಯ ಬೇಡಿಕೆ ಚರ್ಚೆಗೆ ಬಂದಾಗ ಅದರ ಬಗ್ಗೆ ಅಂತಿಮನಿರ್ಣಯವನ್ನು ಹೇಳತಕ್ಕದ್ದು ಸಾಧ್ಯ ಇದೆ ಎಂಬುದನ್ನು ತಮಗೆ ಗಮನಕ್ಕೆ ತರುತ್ತಿದ್ದೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶಿಕ್ಷಕರಂಗಳ ಕೊರತೆ.

೧೦೩೩. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಪ್ರೌಢಶಾಲೆಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಪ್ರೌಢಶಾಲೆಗಳಲ್ಲಿ ಈಗ ಇರುವ ಅಧ್ಯಾಪಕರ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಇ) ಈ ಪ್ರೌಢಶಾಲೆಗಳಿಗೆ ಮಂಜೂರಾದ ಅಧ್ಯಾಪಕರ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

ಈ) ವಿದ್ಯಾರ್ಥಿಗಳ ಪ್ರಮಾಣಕ್ಕನುಗುಣವಾಗಿ ಕೊರತೆ ಇರುವ ಅಧ್ಯಾಪಕರ ಸಂಖ್ಯೆ ಎಷ್ಟು ? ತಾಲ್ಲೂಕುವಾರು ವಿವರ ನೀಡುವುದು)

ಉ) ಈ ಅಧ್ಯಾಪಕರ ಕೊರತೆಯನ್ನು ಯಾವಾಗ ನೀಗಿಸಬಹುದು ?

ಶ್ರೀ ಕೆ.ಎಚ್. ರಂಗನಾಥ್ (ಶಿಕ್ಷಣ ಸಚಿವರು).—

ಅ) ೧೩೪ ಸರ್ಕಾರಿ ಪ್ರೌಢ ಶಾಲೆಗಳು (ಪಟ್ಟಿ ಲಗತ್ತಿಸಿದೆ)

ಆ) ೧೦೩೧ ಶಿಕ್ಷಕರು (ಪಟ್ಟಿ ಲಗತ್ತಿಸಿದೆ).

ಇ) ೧೩೯ ಅಧ್ಯಾಪಕರ ಹುದ್ದೆಗಳು ಮಂಜೂರಾಗಿವೆ (ಪಟ್ಟಿ ಲಗತ್ತಿಸಿದೆ)

ಈ) ೩೬೮ ಅಧ್ಯಾಪಕರ ಕೊರತೆ ಇದೆ. (ಪಟ್ಟಿ ಲಗತ್ತಿಸಿದೆ)

ಉ) ಆದಷ್ಟು ಶೀಘ್ರವಾಗಿ ಬಗೆ ಹರಿಸಲಾಗುವುದು